**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ನಾಲ್ಕನೇ ಅಧಿವೇಶನ**

# ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2024
**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–40)**

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 23) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 5ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975ರ (1975ರ ಕರ್ನಾಟಕ ಅಧಿನಿಯಮ 23) 5ನೇ ಪ್ರಕರಣದ, (ಎಫ್) ಖಂಡದ ತರುವಾಯ ಸೇರಿಸತಕ್ಕದ್ದು, ಎಂದರೆ:-

"(ಜಿ) ಮೂವತ್ತು ವರ್ಷಗಳ ಅವಧಿಗಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ನಂದಿ ಬೆಟ್ಟಗಳಲ್ಲಿನ ರೋಪ್‌ವೇ ಯೋಜನೆಯಡಿಯಲ್ಲಿ ಮೇಲು ಮಾರ್ಗಾಂತ್ಯ ಸ್ಥಳ (ಯುಟಿಪಿ) ಉದ್ದೇಶಕ್ಕಾಗಿ ನಂದಿ ಬೆಟ್ಟದಲ್ಲಿನ ಸರ್ವೆ ನಂ.3ರಲ್ಲಿನ ಎರಡು ಎಕರೆ ಭೂಮಿ." ಅದರ ಚಕ್ಕುಬಂದಿ ಈ ಕೆಳಗಿನಂತಿದೆ,-

ಉತ್ತರ – ವಾಹನ ನಿಲುಗಡೆ ಪ್ರದೇಶ
ದಕ್ಷಿಣ – ಅರ್ಕಾವತಿ ನದಿಯ ಉಗಮ ಸ್ಥಳದ ಪಕ್ಕದಲ್ಲಿರುವ ಬೆಟ್ಟದ ಇಳಿಜಾರು
ಪೂರ್ವ – ಎರಡನೇ ಕೋಟೆ ಗೋಡೆ
ಪಶ್ಚಿಮ – ಮೊದಲನೇ ಕೋಟೆ ಗೋಡೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮೂವತ್ತು ವರ್ಷಗಳ ಅವಧಿಗಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ನಂದಿ ಬೆಟ್ಟಗಳಲ್ಲಿನ ರೋಪ್‌ವೇ ಯೋಜನೆಯಡಿಯಲ್ಲಿ ಮೇಲು ಮಾರ್ಗಾಂತ್ಯ ಸ್ಥಳದ (ಯುಟಿಪಿ) ಅಭಿವೃದ್ಧಿಯ ಉದ್ದೇಶಕ್ಕಾಗಿ ಎರಡು ಎಕರೆ ಭೂಮಿಯನ್ನು ಒದಗಿಸುವುದಕ್ಕೆ ಉಪಬಂದ ಕಲ್ಪಿಸಲು ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ) ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 23) ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಸ್. ಎಸ್. ಮಲ್ಲಿಕಾರ್ಜುನ**
ಗಣಿ , ಭೂವಿಜ್ಞಾನ
ಮತ್ತು ತೋಟಗಾರಿಕೆ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975

## (1975ರ ಕರ್ನಾಟಕ ಅಧಿನಿಯಮ ಸಂಖ್ಯೆ 23)

## ಉದ್ಧೃತ ಭಾಗ

**5. ಕೆಲವೊಂದು ಪ್ರಕರಣಗಳಲ್ಲಿ ಅನುಮತಿ.-** 4ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಬಳಕೆ ಮತ್ತು ಅಂತಹುದೇ ಇತರ ಉದ್ದೇಶಗಳ ಸಂಬಂಧದಲ್ಲಿ ತಾನು ವಿಧಿಸಬಹುದಾದಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು,-

**(ಎಫ್)** ರಿಪೇರಿಗಳು ಮತ್ತು ಇತರ ಅಭಿವೃದ್ಧಿ ಇತರ ಅಭಿವೃದ್ಧಿ ಕಾಮಗಾರಿಗಳ ಉದ್ದೇಶಗಳಿಗಾಗಿ, ಈ ಕೆಳಗೆ ನಿರ್ದಿಷ್ಟಪಡಿಸಿದ ಸರಹದ್ದುಗಳೊಂದಿಗೆ ವಿಧಾನಸೌಧ, ವಿಕಾಸಸೌಧ ಮತ್ತು ಇತರ ನಿರ್ಮಿತಿಗಳ ಕಟ್ಟಡಗಳನ್ನು ಒಳಗೊಂಡ 49 ಎಕರೆಗಳು ಮತ್ತು 34 ಗುಂಟೆಗಳು (ಅಂದಾಜು),-

| | |
|---|---|
| ಉತ್ತರ: | ಶಾಸಕರ ಭವನ ವೃತ್ತದಿಂದ ಪ್ರಾರಂಭವಾಗಿ ರಸ್ತೆ ಉದ್ದಕ್ಕೂ ಮತ್ತು ವಾಹನ ನಿಲುಗಡೆ ಬಾಗಿಲಿನವರೆಗೆ ಕೊನೆಗೊಳ್ಳುವುದು. |
| ದಕ್ಷಿಣ: | ಲೋಕಾಯುಕ್ತ ಕಚೇರಿಯಿಂದ ಪ್ರಾರಂಭವಾಗಿ ಗೋಪಾಲಗೌಡ ವೃತ್ತದಿಂದ ಪೊಲೀಸು ತಿಮ್ಮಯ್ಯ ವೃತ್ತವನ್ನು ಮುಟ್ಟುವ ವಿಧಾನವೀದಿ ರಸ್ತೆ. |
| ಪೂರ್ವ: | ಶಾಸಕರ ಭವನ ವೃತ್ತದಿಂದ ಪ್ರಾರಂಭವಾಗಿ ರಾಜಭವನ ಗೋಡೆಯ ಸರಹದ್ದಿನುದ್ದಕ್ಕೂ ಮತ್ತು ಪೊಲೀಸು ತಿಮ್ಮಯ್ಯ ವೃತ್ತವನ್ನು ಮುಟ್ಟುವುದು. |
| ಪಶ್ಚಿಮ: | ಲೋಕಾಯುಕ್ತ ಕಚೇರಿಯಿಂದ ಪ್ರಾರಂಭವಾಗಿ ಬಹುಮಹಡಿ ಕಟ್ಟಡದ ಗೋಡೆಯುದ್ದಕ್ಕೂ ಮತ್ತು ವಾಹನ ನಿಲುಗಡೆ ಬಾಗಿಲಿನಲ್ಲಿ ಕೊನೆಗೊಳ್ಳುವುದು][1] |

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 23ನೇ ಜುಲೈ 2024